ಕರ್ನಾಟಕ ಉಚ್ಚ ನ್ಯಾಯಾಲಯವನ್ನು ಕೋರಲಾಗಿದ್ದು, ಉಚ್ಚ ನ್ಯಾಯಾಲಯದಿಂದ ಜಿಲ್ಲಾ ನ್ಯಾಯಾಧೀಶರ ಪಟ್ಟಿಯು ಲಭಿಸಿದ ಕೂಡಲೇ ನೇಮಕಾತಿ ಮಾಡಲಾಗುವುದು.

ವಿಷಯ: ಬೀಡಿ ಕಾರ್ಮಿಕರ ವಸತಿ ಯೋಜನೆ.

12.14 (1741)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಬೀಡಿ ಕಾರ್ಮಿಕರುಗಳ ಸಂಖ್ಯೆ ಎಷ್ಟು?

ಆ) ಉಡುಪಿ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರುಗಳು ಅಧಿಕವಾಗಿ ಇರುವುದು ನಿಜವಲ್ಲವೇ?

ಇ) ಕ್ಷೇಂದ್ರ ಸರ್ಕಾರದ ಯೋಜನೆಯನ್ವಯ ಎಷ್ಟು ಬೀಡಿ ಕಾರ್ಮಿಕರುಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ? (ವಿವರ ನೀಡುವುದು)

ಈ) ಈ ತಾರತಮ್ಯ ಹೋಗಲಾಡಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳು ಏನು? ಮಾಹಿತಿ ನೀಡುವುದು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಬೀಡಿ ಮತ್ತು ಸಿಗಾರ್ ಕಾಯ್ದೆ 1996ರ (ಉದ್ಯೋಗ ಮತ್ತು ಷರತ್ತುಗಳು) ಅಡಿಯಲ್ಲಿ ನೋಂದಣಿಯಾದ ಬೀಡಿ ಉದ್ಯಮಗಳಲ್ಲಿ ರಾಜ್ಯಾದ್ಯಂತ 2,92,380 ಬೀಡಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಆ) ಹೌದು.

ಇ) ಕೇಂದ್ರ ಸರ್ಕಾರದ ವಸತಿ ನೀಡುವ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟು 1560 ಮನೆಗಳನ್ನು ಕಟ್ಟಿ ವಿತರಣೆ ಮಾಡಲಾಗಿದೆ. ಅಂದರೆ,

1. ಚಾಮರಾಜನಗರ, ಮೈಸೂರು ಜಿಲ್ಲೆಯಲ್ಲಿ 425 ಮನೆಗಳು.

2. ಕ್ಯಾತಮಾರನಹಳ್ಳಿ, ಮೈಸೂರು ಜಿಲ್ಲೆಯಲ್ಲಿ 1000 ಮನೆಗಳು

3. ಸಾಗರ, ಶಿವಮೊಗ್ಗ ಜಿಲ್ಲೆಯಲ್ಲಿ 135 ಮನೆಗಳು

ಈ) ಬೀಡಿ ಕಾರ್ಮಿಕರಿಗೆ ಎಷ್ಟು ಸಾಧ್ಯವೋ ಅಷ್ಟು ಮನೆಗಳನ್ನು ಕಟ್ಟಿಸಲು

ಸರ್ಕಾರವು ಆಸಕ್ತಿ ಹೊಂದಿದೆ.

ವಿಷಯ: ಭಟ್ಕಳ ತಾಲ್ಲೂಕಿನಲ್ಲಿ ಸೇತುವೆ ನಿರ್ಮಾಣ

1215 (1688)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

1) ಭಟ್ಕಳ ತಾಲ್ಲೂಕಿನ ಬೈಲೂರು ಗ್ರಾಮದ ತುದಳ್ಳಿ-ಮೂರ್ಡೇಶ್ವರ ಸೇತುವೆ ಹಿಂದುಳಿದ ಜನರಿಗೆ ಅತಿ ಅವಶ್ಯವಿದ್ದುದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

3) 1998-99ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಲ್ಲಿ ಹಣ ಮಂಜೂರು ಮಾಡಲಾಗುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

1) ಹೌದು ಬಂದಿದೆ.

2) ನಬಾರ್ಡ್ ಯೋಜನೆಯಡಿಯಲ್ಲಿ ಸದರಿ ಸೇತುವೆಯನ್ನು 30 ಲಕ್ಷ ರೂ. ಮೊತ್ತದಲ್ಲಿ ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.

3) ಸದರಿ ಕಾಮಗಾರಿಯನ್ನು ನಬಾರ್ಡ್ ಎಂಪವರ್ಡ್ ಕಮಿಟಿಯಲ್ಲಿ ಅನುಮೋದನೆಯಾದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ವಿಷಯ: ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಯೋಜನೆ.

1216 (1685)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿರುವ ವಿವಿಧ ಯೋಜನೆಗಳಲ್ಲಿ ಅಂದರೆ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ, ಸಾಮಾಜಿಕ ಅರಣ್ಯ, ಭೂಸಾರ ಸಂರಕ್ಷಣೆ, ಈ ಯೋಜನೆಗಳಲ್ಲಿ ಬೆಳೆಸಿರುವ ಒಟ್ಟು ಸಾಮಾಜಿಕ ಅರಣ್ಯದ ವಿಸ್ತೀರ್ಣವೆಷ್ಟು?